| ಕರ್ನಾಟಕ ವಿಧಾನ ಪರಿಷತ್ತು | |
|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 551 (569) |
| 2) ಸದಸ್ಯರ ಹೆಸರು | : ಶ್ರೀ ತಿಪ್ಪಣ್ಣಪ್ಪ ಕಮಕನೂರ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3) ಉತ್ತರಿಸುವ ದಿನಾಂಕ | : 20.08.2026 |
| 4) ಉತ್ತರಿಸುವವರು | : ಮಾನ್ಯ ಮುಖ್ಯಮಂತ್ರಿಗಳು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿವಿಧ ರೀತಿಯಲ್ಲಿ ಗುಟ್ಕಾ ವ್ಯಾಪಾರಸ್ಥರು ಅಪಾರ ಪ್ರಮಾಣದಲ್ಲಿ ತೆರಿಗೆ ವಂಚಿಸುತ್ತಿರುವುದನ್ನು ತಡೆಗಟ್ಟಲು ವಾಣಿಜ್ಯ ಮತ್ತು ತೆರಿಗೆ ಇಲಾಖೆಯವರು ವಿಫಲಾಗಿದ್ದಾರೆಯೇ: | ಇಲ್ಲ.<br>ಇಲಾಖೆಯ ಜಾರಿ ಹಾಗೂ ಜಾಗೃತಿ ವಿಭಾಗಗಳು ದತ್ತಾಂಶ ವಿಶ್ಲೇಷಣೆಯೊಂದಿಗೆ ಪಾನ್ ಮಸಾಲ ವ್ಯಾಪಾರಸ್ಥರ ತಪಾಸಣೆ ಹಾಗೂ ರಸ್ತೆ ಜಾಗೃತಿ ಕಾರ್ಯಗಳ ಮೂಲಕ ತೆರಿಗೆ ವಂಚನೆಯನ್ನು ಪತ್ತೆ ಹಚ್ಚಿ, ತೆರಿಗೆ ವಂಚನೆಯನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಆ) | ಬೆಂಗಳೂರು ನಗರದ ಯಲಹಂಕ ಉಪನಗರದಲ್ಲಿ ಪ್ರತಿಯೊಂದು ಬೀಡಾ ಅಂಗಡಿ ಪ್ರತಿಯೊಂದು ಪೆಟ್ಟಿಗೆ ಅಂಗಡಿ, ದಿನಸಿ ಅಂಗಡಿಗಳಲ್ಲಿ ಈ ವಿವಿಧ ರೀತಿಯ ಗುಟ್ಕಾ ವ್ಯಾಪರವಾಗುತ್ತಿದ್ದು ಇವರಿಗೆ ಸರಬರಾಜು ಮಾಡುವ ದೊಡ್ಡ ಜಾಲವಿದ್ದು ಮನೆಯಲ್ಲಿಯೇ ಕೋಟಿಗಟ್ಟಲೆ ದಾಸ್ತಾನು ಇಟ್ಟುಕೊಂಡು ಯಾವುದೇ ಜಿ.ಎಸ್.ಟಿ, ರಶೀದಿಗಳಲ್ಲಿದೆ ಎಲ್ಲವೂ ನಗದುರೂಪದಲ್ಲಿ ಮಾರಾಟ ಮಾಡುತ್ತಿರುವುದು ಅವ್ಯಾಹತವಾಗಿ ನಡೆಯುತ್ತಿರುವುದನ್ನು ನಿರ್ಭಂಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ವಾಣಿಜ್ಯ ತೆರಿಗೆ ಇಲಾಖೆ ಜಾರಿ ವಿಭಾಗವು ತೆರಿಗೆ ವ್ಯಾಪ್ತಿಗೆ ಒಳಪಡುವ ವರ್ತಕರು ಅವರು ಮಾಸಿಕ ಘೋಷಿಸಿಕೊಳ್ಳುವ ವಹಿವಾಟಿನ/ಪಾವತಿಸುವ ತೆರಿಗೆಯಲ್ಲಿ ಲೋಪಗಳು ಕಂಡು ಬಂದಲ್ಲಿ ನಿಯಮಿತ ತಪಾಸಣೆಯನ್ನು ಕೈಗೊಳ್ಳುವುದು. ಬಹುತೇಕ ಬೀಡಾ ಅಂಗಡಿ, ಪೆಟ್ಟಿ ಅಂಗಡಿ, ದಿನಸಿ ಅಂಗಡಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017ರ ಪ್ರಕರಣ-22ರಡಿ ತಿಳಿಸಲಾದ ಗರಿಷ್ಠ ವಹಿವಾಟು ಮಟ್ಟವನ್ನು ಮೀರದೇ ಇರುವ ಕಾರಣ ಜಿಎಸ್‌ಟಿ ಕಾಯ್ದೆ ಅಡಿ ನೋಂದಣಿ ಅಗತ್ಯವಿರುವುದಿಲ್ಲ. ಆದಾಗ್ಯೂ ಜಾರಿ ವಿಭಾಗವು ನಂಬಲರ್ಹ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ತೆರಿಗೆ ವಂಚನೆಯಲ್ಲಿ ತೊಡಗಿರುವ ಪಾನ್ ಮಸಾಲ ವ್ಯಾಪರಿಗಳನ್ನು ತಕ್ಷಣವೇ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ರ ಪ್ರಕರಣ 67ರಡಿ ತಪಾಸಣೆ ನಡೆಸಿ ಪ್ರಕರಣ 122, 129, 130 ಅಡಿಯಲ್ಲಿ ದಂಡವನ್ನು ವಿಧಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |
| ಇ) | ಎಷ್ಟು ಬೀಡಾ ಅಂಗಡಿ, ಪೆಟ್ಟಿಗೆ ಅಂಗಡಿ, ದಿನಸಿ ಅಂಗಡಿಗಳಲ್ಲಿ ಶೋಧ ನಡೆಸಿ ಪತ್ತೆ ಹಚ್ಚಲಾಗಿದೆ; ಅವರಿಂದ ಮೂಲ ಸರಬರಾಜುದಾರರ ಮಾಹಿತಿ ಪಡೆದು ಅವರನ್ನು ಬಂಧಿಸಲು ಕೆಲಸ ಇದುವರೆವಿಗೆ ಏಕೆ ಮಾಡಿಲ್ಲ; | ಬೆಂಗಳೂರು ನಗರ ವ್ಯಾಪ್ತಿಯಲ್ಲಿ 2024-25ನೇ ಸಾಲಿನಲ್ಲಿ 47, 2025-26 ರಲ್ಲಿ 10 ಮತ್ತು 2026-27 ನೇ ಸಾಲಿನಲ್ಲಿ 03, ಒಟ್ಟು 60 ಪಾನ್ ಮಸಾಲ ವ್ಯಾಪಾರಸ್ಥರ ತಪಾಸಣೆಯನ್ನು ಕೈಗೊಳ್ಳಲಾಗಿದೆ. ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017ರ ಪ್ರಕರಣ 132 (1) (i) ಪ್ರಕರಣದಲ್ಲಿ ತೆರಿಗೆ ವಂಚಿಸಿದ ಪ್ರಮಾಣ ರೂ. 5 ಕೋಟಿ ಮೀರಿದ ಪ್ರಕರಣಗಳಲ್ಲಿ ಮಾತ್ರ ತೆರಿಗೆ ವಂಚಿಸಿದ ವರ್ತಕರನ್ನು ಬಂಧಿಸುವ ಅಧಿಕಾರವಿದ್ದು, ಅಂತಹ ಪ್ರಕರಣಗಳಲ್ಲಿ ಬಂಧಿಸುವ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುವುದು. |
| ಈ) | ಈ ಬೃಹತ್ ತೆರಿಗೆ ವಂಚಕರ ಜಾಲವನ್ನು ಪತ್ತೆ ಹಚ್ಚಿ ತೆರಿಗೆ ಸೋರಿಕೆ ತಡೆಗಟ್ಟಲಾಗುವುದು? | ಜಾರಿ ಹಾಗೂ ಜಾಗೃತಿ ವಿಭಾಗಗಳಿಂದ ಸಂದೇಹಾಸ್ಪದ ಪಾನ್ ಮಸಾಲ ವರ್ತಕರನ್ನು ತಪಾಸಣೆಗೆ ಒಳಪಡಿಸಿ ತೆರಿಗೆ ಸೋರಿಕೆಯನ್ನು ತಡೆಗಟ್ಟಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಆಇ 41 ಸಿಎಸ್‌ಎಲ್ 2026**

(ಡಿ.ಕೆ. ಶಿವಕುಮಾರ್)
ಮುಖ್ಯಮಂತ್ರಿ